ಪ್ರಕಾಶಕರು:
ಕು. ಶಿ. ಹರಿದಾಸ ಭಟ್ಟ, ಎಂ. ಎ.,
ಮಹಾತ್ಮಾ ಗಾಂಧಿ ಮೆಮೋರಿಯಲ್ ಕಾಲೇಜ್, ಉಡುಪಿ.

ಶ್ರೀ ಆನಂದತೀರ್ಥರು

ಸುಬ್ಬಣ್ಣ ರಂಗನಾಥ ಎಕ್ಕುಂಡಿ

೧೯೫೩

ಪ್ರಕಾಶಕರು:

ಕು. ಶಿ. ಹರಿದಾಸ ಭಟ್ಟ, ಎಂ. ಎ.,

ಮಹಾತ್ಮಾ ಗಾಂಧಿ ಮೆಮೋರಿಯಲ್ ಕಾಲೇಜ್, ಉಡುಪಿ.

ಪ್ರಥಮ ಮುದ್ರಣ ೧೯೫೩.

ಬೆಲೆ:
ಎಂಟಾಣೆ.

ಮುದ್ರಕರು:
ಬಿ. ಕೃಷ್ಣಯ್ಯ
ಮಣಿಪಾಲ ಪವರ್ ಪ್ರೆಸ್, ಮಣಿಪಾಲ, ದ. ಕ.



धियो यो नः प्रचोदयात्

ಪಡಿಯಚ್ಚು: ಕಲಾಕಾರ ಶ್ರೀ। ಕೆ. ಬಿ. ರಾಮಕೃಷ್ಣರಾಯರ ಕೃಪೆಯಿಂದ.

ಮುನ್ನುಡಿ

ಭಕ್ತಿಯು ಶೃಂಗಾರದ ಒಂದು ಸ್ವರೂಪ ಮತ್ತು ಅದರ ಪರಮೋಚ್ಚ ಹಂತವೆಂದು ನನ್ನ ಅಭಿಮತ. ಹಿಂದಿನ ಕಾವ್ಯಶಾಸ್ತ್ರಜ್ಞರು ಭಕ್ತಿಯನ್ನು ರಸದ ಸ್ಥಾನದಲ್ಲಿ ಪರಿಗಣಿಸಲಿಲ್ಲವೆಂಬುದೂ ನಿಜ. ಆದರೆ ಪ್ರೇಮವೇ ಶೃಂಗಾರದ ಸ್ಥಾಯಿಭಾವವಾಗಿರುವಾಗ ಆನಂದಘನನಾದ ಪರಮಾತ್ಮನ ಬಗ್ಗೆ ಇರುವ ನಿಸ್ಸೀಮವಾದ ಪ್ರೇಮವೇ ಭಕ್ತಿಯಾಗಿರುವಾಗ, ಈ ಸಾತ್ವಿಕ ಪ್ರೇಮವನ್ನು ರಸದ ಮಟ್ಟಕ್ಕೇರಿಸದಿರುವುದು ಅಷ್ಟು ಸಮಂಜಸವೆನಿಸಲಾರದು. ಕಾವ್ಯದ ಚರಮ ಲಕ್ಷ್ಯವಾದ ಆತ್ಮ ನಿರ್ವೃತಿಯನ್ನು ನಿರ್ಮಿಸುವುದರಲ್ಲಿ ಭಕ್ತಿಯು ಯಾವ ರಸದಿಂದಲೂ ಹಿಂದುಳಿಯಲಾರದು. ಹಿಂದಿನ ಕಾವ್ಯಗಳಲ್ಲಿ ಹೆಚ್ಚಾಗಿ ಸತಿಪತಿಗಳ ವಿಯೋಗವೇ ಕರುಣಾರಸದ ಭೂಮಿಕೆಯಾಗಿ ವರ್ಣಿಸಲ್ಪಟ್ಟಿದ್ದರೂ ಸಮಗ್ರ ಜನಾಂಗದ ಕ್ರಂದನ ಪೂರ್ಣ ವೇದನೆಯಲ್ಲಿ ಸಮಭಾಗಿಗಳಾಗಿ ಕರುಣರಸದ ವಾಹಿನಿಯನ್ನು ಹರಿಸುವ ದೃಷ್ಟಿ ಇಂದಿನ ಕವಿಗಳಲ್ಲಿ ವಿಶೇಷವಾಗಿ ಬಳಕೆಗೆ ಬರುತ್ತಿದೆ. ಅದರಂತೆ ಶುದ್ಧ ಸಾತ್ವಿಕವಾದರೂ ಪರಮೋಚ್ಚ ಆದರ್ಶವೆನಿಸಲಾರದ ನಲ್ಲ-ನಲ್ಲೆಯರ ಪ್ರಣಯ ವ್ಯವಹಾರದಲ್ಲೇ ಶೃಂಗಾರರಸವು ಸೀಮಿತವಾಗದೆ ವಿಶ್ವಾಂತರ್ಯಾಮಿಯಾದ ಭಗವಂತನ ಅಪಾರ ಪ್ರೇಮದಲ್ಲಿ ಶೃಂಗಾರರಸವು ಪರಿವರ್ತಿತಗೊಳ್ಳುವುದು ಶೃಂಗಾರದ ಉಜ್ವಲತೆಗೆ ಹೊಸ ಒಪ್ಪವನ್ನು ತರಬಲ್ಲುದು. ಕೇವಲವಾಗಿ ಪ್ರಣಯಿಗಳ ಸರಸ-ಸಲ್ಲಾಪಗಳು ಹಾಗೂ ವಿರಸ-ವಿಲಾಪಗಳನ್ನೇ ಶೃಂಗಾರ ಕರುಣಗಳ ಪ್ರಧಾನ ಕ್ಷೇತ್ರಗಳನ್ನಾಗಿ ಬಳಕೆಗೆ ತಂದು ಹಿಂದಿನ ಕವಿಗಳು ತಮ್ಮ ಕಾವ್ಯಸೃಷ್ಟಿಯನ್ನು, ಆ ಮೂಲಕವಾಗಿ ಜನಾಂಗದ ದೃಷ್ಟಿಯನ್ನು ಸಂಕುಚಿತಗೊಳಿಸಿದರೆಂದು ಹೇಳಬೇಕಾಗುವುದು. ಹಿಂದಿನ ಅನೇಕ ಕಾವ್ಯಗಳಲ್ಲಿ ನಾಯಕ–ನಾಯಿಕೆಯರ ಪ್ರಣಯ ಚೇಷ್ಟೆಗಳಲ್ಲೇ ಹೆಚ್ಚಾಗಿ ಎಲ್ಲ ರಸಗಳನ್ನು ಅಂತರ್ಭಾವಗೊಳಿಸುವ ಪ್ರಯತ್ನವು ಕಂಡುಬಂದಿರುವುದರಿಂದ ಈ ಕೆಲ ನಿಷ್ಠುರ ಮಾತುಗಳನ್ನು ಬರೆಯಬೇಕಾಯಿತು. ಕವಿಗಳು ರಸಗಳ ಕ್ಷೇತ್ರಗಳನ್ನು ವಿಸ್ತರಿಸಿದರೆ ಅದರಿಂದ ಮಾನವನ ದೃಷ್ಟಿಯೂ ವ್ಯಾಪಕವಾಗಿ ಜನತೆಯ ಅಂತರಂಗದ ಸಿಹಿಕಹಿಗಳಲ್ಲಿ ಸಮರಸನಾಗುವ ವಿಶಾಲ ಪ್ರವೃತ್ತಿಯು ಬೆಳೆಯಲು ಅನುಕೂಲವಾಗುವುದು. ವೇದವ್ಯಾಸರ "ಭಾಗವತ" ತುಲಸಿಯವರ "ರಾಮಚರಿತ ಮಾನಸ" ಆನಂದತೀರ್ಥರ "ದ್ವಾದಶ ಸ್ತೋತ್ರ" ಮುಂತಾದ ಭಕ್ತಿಕಾವ್ಯಗಳೂ ಶೃಂಗಾರರಸದ ಉದಾತ್ತ ಮಾದರಿಗಳು ಎಂಬುದು ನನ್ನ ನಿಃಸಂದಿಗ್ಧವಾದ ಅಭಿಪ್ರಾಯ. ಈ ಭಕ್ತಿಕಾವ್ಯಗಳ ಆಸ್ವಾದದಿಂದ ವಿಶ್ವಾಂತರ್ಯಾಮಿಯ ದಿವ್ಯದರ್ಶನವಾಗಿ, ಅಂತರಂಗದಲ್ಲಿ ಪವಿತ್ರತೆ, ಪರಿಶುದ್ಧತೆಗಳು ಮೂಡುವುದು ಸಹಜವಾಗಿದೆ. ಇಂತಹ ಶಾಂತಿ ಭಕ್ತಿ ರಸಗಳ ಅಮೃತವನ್ನು ಸುರಿಸುವ ಕಾವ್ಯಗಳಲ್ಲಿ ಶ್ರೀಮಾನ್ ಎಕ್ಕುಂಡಿಯವರ "ಆನಂದತೀರ್ಥರು" ಎಂಬುದೂ ಒಂದಾಗಿದೆ.

ಮಾನವನ ಸಂಕಲ್ಪ ಶಕ್ತಿಯು ಆದರ್ಶವೂ, ಅಗಾಧವೂ ಆಗಿದೆ. ಮಾನವನ ಸಂಕಲ್ಪ ಶಕ್ತಿಯ ಪ್ರಭಾವದಿಂದಲೇ ನಾವಿಂದು ವಿಶ್ವದಲ್ಲಿ ವಿಜ್ಞಾನದ ವಿವಿಧ ವೈಚಿತ್ರ್ಯಗಳನ್ನು ಕಾಣುತಿದ್ದೇವೆ. ಈ ಸಂಕಲ್ಪ ಶಕ್ತಿಯು ಕೂಡಲೇ ತನ್ನ ಪರಿಣಾಮವನ್ನು ನೀಡದೆ ಕ್ರಮಕ್ರಮವಾಗಿ ತನ್ನಿಂದ ಪ್ರಕೃತಿಯ ಮೇಲೆ ಆವಿಷ್ಕರಿಸ ಬಹುದಾದ ವೈಚಿತ್ರ್ಯಗಳನ್ನು ತೋರಿಸುತ್ತಿದೆ. ಇದು ಸಂಕಲ್ಪ ಶಕ್ತಿಯ ಆದಿ ಭೌತಿಕ ಪ್ರಯೋಗದ ಫಲಿತಾಂಶ. ಆದರೆ ಪವಿತ್ರಾತ್ಮರ ಸಂಕಲ್ಪ ಶಕ್ತಿಗೆ ಈ ದ್ರಾವಿಡ-ಪ್ರಾಣಾಯಾಮದ ಅವಶ್ಯಕತೆಯಿಲ್ಲ. ಮಹಾಮಾನವರ ತಪೋಮಯ ವಾದ ಸಂಕಲ್ಪವು ನೇರವಾಗಿ ಪ್ರಕೃತಿಯ ಮೇಲೆ ತನ್ನ ಸಾಮರ್ಥ್ಯವನ್ನೂ ಪ್ರಭಾವವನ್ನೂ ತೋರಿಸಬಲ್ಲುದು. ಶ್ರೀಮದಾನಂದತೀರ್ಥರ ಸಂಕಲ್ಪ ಶಕ್ತಿಯ ಅಮೋಘ ಘಟನೆಯು ಈ ಲಘುಕಾವ್ಯದಲ್ಲಿ ಮನೋಹಾರಿಯಾಗಿ ಹೆಣೆಯಲ್ಪಟ್ಟಿದೆ. ಮತ್ತು ಆ ಮೂಲಕವಾಗಿ ಜನತೆಯ ಆಧ್ಯಾತ್ಮ ಜೀವನದ ಕೈದೀವಿಗೆಯಾದ ಕೃಷ್ಣಮೂರ್ತಿಯನ್ನು ಶ್ರೀಮದಾಚಾರ್ಯರು ಪಡೆದ ಸಂದರ್ಭವೂ ಈ ಕಾವ್ಯ ವಿತಾನದಲ್ಲಿ ಸುಂದರವಾಗಿ ಚಿತ್ರಿತವಾಗಿದೆ. ಈ ಕೃಷ್ಣಮೂರ್ತಿಯನ್ನು ಪಡೆದ ಸನ್ನಿವೇಶದಲ್ಲೆ ಆನಂದತೀರ್ಥರು ತಮ್ಮ ಜೀವನದ ಅಮೂಲ್ಯ ಕಾವ್ಯರತ್ನವಾದ ದ್ವಾದಶಸ್ತೋತ್ರವನ್ನು ಉದ್ಗರಿಸಿದುದಾಗಿದೆ. ಈ ಶಿಲಾಪ್ರತೀಕದಲ್ಲಿ ಅಂತರ್ಹಿತ ನಾದ ಚಿನ್ಮಯ ಮೂರ್ತಿಯನ್ನು ಸಂದರ್ಶಿಸುತ್ತಲೇ ಅಮೋಘ ತತ್ತ್ವಶಾಸ್ತ್ರ ಪಂಡಿತರಾದ ಆಚಾರ್ಯರ ಹೃದಯದಿಂದ ಅಕಸ್ಮಾತ್ತಾಗಿ ಈ ಕಾವ್ಯವಾಹಿನಿಯು ಹೊರಚಿಮ್ಮಿತು. ಆಚಾರ್ಯರ ಅಂತರಂಗದ ಅಖಂಡ ಪ್ರೇಮರಸವನ್ನು ಹೊರ ಸೂಸುವ ಈ ದ್ವಾದಶಸ್ತೋತ್ರಕ್ಕೆ ವಿಶ್ವದ ಸಾಹಿತ್ಯದಲ್ಲಿ ಅದ್ವಿತೀಯವೂ ಗಣ್ಯವೂ ಆದ ಸ್ಥಾನವಿದೆ. ಹೀಗೆ ಆಚಾರ್ಯರ ಕಾವ್ಯ ಪ್ರತಿಭೆಯು ಜಗತ್ತಿಗೆ ಬೆಳಕಿಗೆ ಬಂದ ಸನ್ನಿವೇಶವನ್ನು ಕುರಿತಾಗಿಯೇ ಶ್ರೀಮಾನ್ ಎಕ್ಕುಂಡಿಯವರ ಕಾವ್ಯಧಾರೆಯು ಹರಿದದ್ದು ಒಂದು ಮಹತ್ವದ ಯೋಗಾಯೋಗವಾಗಿದೆ. ಅನುಭವದ ಹಿನ್ನೆಲೆ ಯಿಲ್ಲದ ಕಾವ್ಯವು ಕಾವ್ಯವಲ್ಲ. ಅದು ಶಬ್ದ ಕಾನನ. ಕವಿಯು ಭಾವಾವೇಶದಿಂದ ರಚಿಸಿದ ಕಾವ್ಯವೇ ರಸದ ಕಾಸಾರ. ಶ್ರೀಮಾನ್ ಎಕ್ಕುಂಡಿಯವರು ರಚಿಸಿದ ಈ ಕಾವ್ಯದಲ್ಲಿ ಅವರ ಭಾವುಕತೆ ಮತ್ತು ತನ್ಮಯತೆ ಸ್ಪಷ್ಟವಾಗಿ ವ್ಯಕ್ತವಾಗುತ್ತಿದೆ. ಹೀಗೆ ಈ ಕಾವ್ಯ ಕುಸುಮವು ಉಪನಿಷತ್ತಿನಲ್ಲಿ ಪ್ರತಿಪಾದಿತವಾದ ಆಧ್ಯಾತ್ಮಿಕವಾದ ಮಧುವನ್ನೂ ರಸಿಕರು ಅನುಭವಿಸಬಹುದಾದ ಆದಿಭೌತಿಕ ಮಧುವನ್ನೂ ನೀಡಲು ಸಮರ್ಥವಾಗಿದ್ದು ಸರ್ವದೃಷ್ಟಿಯಿಂದಲೂ ಮನೋರಂಜಕವಾಗಿದೆ. ಇದರಿಂದ ಜನತೆಯ ಅಂತರಂಗವಾದ ಭಕ್ತಿರಸ ತಂತುವು ಉದ್ರಿಕ್ತವಾಗಿ ಶ್ರೀಮಾನ್ ಎಕ್ಕುಂಡಿಯವರ ಶುಭಪ್ರಯತ್ನವು ಸಫಲವಾಗಲಿ ಎಂದು ಹಾರೈಸುವೆವು.

ನಂದನ, ಚೈತ್ರ-ಬ। ೬
ಉಡುಪಿ.

ಶ್ರೀ ವಿಶ್ವೇಶತೀರ್ಥ ಶ್ರೀಪಾದಂಗಳವರು
ಶ್ರೀ ಪೇಜಾವರ ಮಠ.

ಶ್ರೀ ವೇದವ್ಯಾಸ ಪ್ರಸನ್ನ

ಶ್ರೀ ಆನಂದತೀರ್ಥರು

ಪಾಲಿಸು ಹರಿ ಕಮಲ ನಯನ
ಪಾಲಗಡಲ ಶೇಷಶಯನ
ಕೇಶವ ನಾರಾಯಣ ಗೋವಿಂದ
ಮಾಧವ ಮೇಘಶ್ಯಾಮ ಮುಕುಂದ
ಮೋಹನ ಪುರುಷೋತ್ತಮ ಅರವಿಂದ
ಗೋ ಗೋಪಾಲಕ ಪರಮಾನಂದ
ಗೋವರ್ಧನ ಗಿರಿಧಾರಿ ಮುರಾರಿ
ವನಮಾಲಾ ಪೀತಾಂಬರ ಧಾರಿ
ಕಮಲವದನ ಕಮಲಾಕ್ಷ ಶ್ರೀಧರ
ಸಂಕರ್ಷಣ ಶ್ರೀಹರಿ ಮುರಲೀಧರ
ನಾರಾಯಣ ನರಹರಿ ಮಧುಸೂದನ
ವಾಸುದೇವ ಪ್ರದ್ಯುಮ್ನ ಜನಾರ್ದನ
ನಮೋ ನಮೋ ನಿಖಿಲಾತ್ಮ ನಿರಂಜನ
ವರದರಾಜ ಮಾಯಾವಟು ವಾಮನ
ಸುಂದರ ಮಾಧವ ಹರಿ ಕಮಲಾನನ
ನಮೋ ನಮೋ ಶ್ರೀಹರಿ ನಾರಾಯಣ
ಶ್ರೀ ಹರಿ ಸರ್ವೋತ್ತಮ
ಹನುಮ ಭೀಮ ಮಧ್ವರೆಂದು
ಮೂರು ರೂಪ ತಳೆದು ಬಂದ
ವಾಯು ಜೀವೋತ್ತಮ.

ಪಾಲಿಸೆಮ್ಮನು ಗುರುವೆ ಪವಮಾನರಾಯ
ನೀಲಮೇಘಶ್ಯಾಮ ಶ್ರೀರಂಗ ಪ್ರಿಯ
ಶ್ರೀಪತಿಯ ನಾಭಿಕಮಲದಿ ಅಜ ಜನಿಸಿದನು
ಅಜನ ಮಾನಸ ಪುತ್ರರೇ ಸನಕಾದಿಗಳು
ಸನಕಾದಿಗಳ ಶಿಷ್ಯರೇ ದೂರ್ವಾಸರು
ದೂರ್ವಾಸರ ಶಿಷ್ಯರೇ ಪರತೀರ್ಥರು.
ಪರತೀರ್ಥರ ಶಿಷ್ಯರೇ ಸತ್ಯಪ್ರಜ್ಞರು
ಸತ್ಯಪ್ರಜ್ಞರ ಶಿಷ್ಯರೇ ಪ್ರಾಜ್ಞತೀರ್ಥರು
ಪ್ರಾಜ್ಞತೀರ್ಥರ ಶಿಷ್ಯರೇ ಅಚ್ಯುತಪ್ರೇಕ್ಷರು
ಅಚ್ಯುತಪ್ರೇಕ್ಷರ ಕರಸಂಜಾತರೇ ಮಹಾಭಾಷ್ಯಕಾರರು
ಮಹಾಭಾಷ್ಯಕಾರರೇ ಗುರು ಮುಖ್ಯಪ್ರಾಣರು
ಗುರು ಮುಖ್ಯಪ್ರಾಣ ಪತಿ ನಮ್ಮ
ಪುರಂದರ ವಿಠಲನ ದಾಸರಿಗೆ ನಮೋ ನಮಃ

★

೧

ಮೂಡಿ ಬಂದ ನೇಸರು
ಕೇಳಿ ನೆಲದ ಕೀಸರು
सोऽहं ದ ನಂಜು ಸವಿದ
ತಿಮಿರ ಬದ್ಧ ಸೃಷ್ಟಿಯೆಲ್ಲ
अहं ब्रह्मास्मिಯ ಮಂಜುಕವಿದ
ದಿಗ್ದೆಸೆಗಳ ದೃಷ್ಟಿಯೆಲ್ಲ
ಬಿತ್ತ ಭೂಮಿ ಬರಡಾಯಿತು
ಕೊಟ್ಟ ಕಣ್ಣು ಕುರುಡಾಯಿತು
ನಂದನಬನ ಕೊರಡಾಯಿತು

ಅಂಥಂತಮ ಬಿಗಿಯುತಿತ್ತು
ಲೋಕಕೆ ದಿಗ್ಬಂಧನ
ನೆಲದ ಬಾಯಿ ಹೊಗೆಯುತಿತ್ತು
ಮೂಕಬಲಿಗೆ ನೆಗೆಯುತಿತ್ತು
ಮುಗಿಲಿನೆದೆಯ ಸ್ಪಂದನ
ದಿಗ್ದೆಸೆಗಾಕ್ರಂದನ
"ದಿತಿಯ ಗಾಂಧಾರಿ ಗರ್ಭಹೊತ್ತು ಬಾಳಲಾರೆನು
ತಾಮಸಿಗಳ ಕೋಟಿ ಪಿಂಡ ಭಾರ ತಾಳಲಾರೆನು
ಉದಯವೆಂದು ಬಂದೀತೊ?
ಬಿಡುಗಡೆ ತಂದೀತೊ?"
ಮುಗಿಲು ಕೂಡ ಕಾರುತಿತ್ತು
ಕಪ್ಪಿನಿರುಳ ನೆತ್ತರು
ನೆಲ ಮುಗಿಲುಗಳೆತ್ತರು.
"ವೈದಿಕ ಧರ್ಮದ ಪುನರುತ್ಥಾಪನ
ಹೋಮ ಹವನ ಯಜ್ಞ ಯಾಗ
ಏಕಾದಶ ರುದ್ರಯೋಗ
ಕುರಿಯ ಹರಕೆ ಕೊಟ್ಟಿರಾ?
ಮೂಕ ಬಲಿಯನಿಟ್ಟಿರಾ?
ಬ್ರಹ್ಮ ಸತ್ಯ, ಜಗನ್ಮಿಥ್ಯ
ಸಂಸಾರದೊಳುಂಟೆ ತಥ್ಯ
ನಾನೆ ಮಹಾ ಬ್ರಹ್ಮನು
ಕಲಿಯ ಅಣ್ಣ ತಮ್ಮನು"
ಈ ಪ್ರಪಂಚವೊಂದು ಕನಸು ಆಭಾಸದ ಮೋಹಂ
तत्त्वमसि! शिवोऽहं ।।
ಬೆಂಕಿಗಿಟ್ಟ ಹವಿರ್ಭಾಗ ನನ್ನದುಂಟು **सोऽहं ।।**
ಕಡಿದ ಕೋಟಿ ಮೂಕಪ್ರಾಣಿ

ತತ್ವಮುಸಿಗೆ ಸತ್ತವು
ಮೂಲೆಮೂಲೆಗತ್ತವು
ಹೋತಾರನ ಹೋತು ತಿಂದು
ಇವನ ಪುಣ್ಯ ಸುಡುವೆನೆಂದು
ಸಪ್ತ ಜಿಹ್ವೆಗಳನು ಚಾಚಿ
ಹೊಯ್ಯುತಿರುವ ಹವಿಯು ಬಾಚಿ
ಭುಗಿಲೆದ್ದನು ಅಗ್ನಿ ನೊಂದು
ಮುಗಿಲುಕೂಡ ನರಳುತಿತ್ತು
ಕಂಡು ಮೂಕ ವೇದನೆ!
ದೈತ್ಯರ ದುರ್ಬೋಧನೆ
ದೇವಗಣವೆ ಕೆರಳುತಿತ್ತು
"ಜೀವಕೆಂದು ಬಿಡುಗಡೆ?
ಧರ್ಮಕೆಂದು ನಿಲುಗಡೆ?"
ಪಾಪ ಕಾರಿದಿರುಳ ದಾರಿ
ಜೀವ ನಡೆದ ಜಾತ್ರೆಗೆ
ದೂರದೊಂದು ಯಾತ್ರೆಗೆ
ಕೂಗುತಿಹವು ಹೌಹಾರಿ
"ದಾರಿಯಾವುದಯ್ಯಾ ವೈಕುಂಠಕೆ?
ಆದಿ ನಾರಾಯಣನ ಶಿರಿ ನಿಲಯಕೆ?
ದಾರಿಯಾವುದಯ್ಯಾ ವೈಕುಂಠಕೆ?"
"ಕಂಡು ಕಂಡು ನೀ ಎನ್ನ ಕೈ ಬಿಡುವರೆ ಕೃಷ್ಣ
ಪುಂಡರೀಕಾಕ್ಷ ಶ್ರೀ ಪುರುಷೋತ್ತಮ"
"मद्भक्ताः यत्र गायंति तत्र तिष्ठामि नारद "
"**अभीः** ಯಾತ್ರಿಕರೆ!"
ಮೂಡಿಬಂದ ನೇಸರು
ಕೇಳಿ ನೆಲದ ಕೇಸರು

"अभीः ಯಾತ್ರಿಕರೆ!"
"ಒಂದೇ ಕೂಗಳತೆ ವೈಕುಂಠಕೆ
ಆದಿನಾರಾಯಣನ ಶಿರಿ ನಿಲಯಕೆ!
ಒಂದೇ ಕೂಗಳತೆ ವೈಕುಂಠಕೆ."
ಗುಡಿಗೆ ಹೊರಟ ದಾರಿಯಲ್ಲಿ
ಹೆಜ್ಜೆಗೊಂದು ಹೂವಿದೆ,
ಪುಣ್ಯ ಪಯಣ ಸಾರುವಲ್ಲಿ
ನಿಮಿಷಕೊಂದು ನೋವಿದೆ.
"उत्तिष्ठत।"
ಕಂಡಿದೀರ ಹಾಲುಕಡಲು ಹರಿಯ ಶೇಷತಲ್ಪವ?
ಕೃಷ್ಣಗೋವಿಂದ ಕುಣಿಸುತಿರುವ ಕೋಟಿಕಲ್ಪವ?
ಪದ್ಮನಾಭ ವಾಸುದೇವ ವಿಷ್ಣುಸಂಕಲ್ಪವ?
ಶ್ವೇತ ದ್ವೀಪದಲ್ಲಿ ಮಹಾಶೇಷಶಾಯಿ ಶ್ರೀಧರ!
ಶಂಖ ಚಕ್ರ ಗದಾ ಪದ್ಮಧಾರಿ ಮುರಲೀಧರ?
ಮಂಗಲಗುಣಪೂರ್ಣನೀತ
ವೇದವಂದ್ಯ ಜಗನ್ನಾಥ!
ಕೋಟಿಸೂರ್ಯಬಿಂಬ ತೇಜ!
ವೃಂದಾರಕ ವಂದ್ಯರಾಜ!
"जाग्रत ॥"
ನಮ್ಮ ದಾರಿ ನಿಮ್ಮ ದಾರಿ ಪುಣ್ಯಪಂಥವಲ್ಲಿಗೆ!
ತಂದಿರೇನು ಮಲ್ಲಿಗೆ?
"ಹೂವ ತರುವರ ಮನೆಗೆ ಹುಲ್ಲ ತರುವ
ಅವ್ವ ಲಕುಮಿರಮಣ ಇವಗಿಲ್ಲ ಗರುವ."
"दासोऽहं" ಎನ್ನಿರಿ
ಎತ್ತಲೆಳಸೆ ಬರುವ ಹೆಡೆಯನೊತ್ತುವ ಪಾತಾಳಕೆ!
ಅಂಧಂತಮದಾಳಕೆ

ಹೊತ್ತು ತಂದ ಮೂಟೆಗಳನು ಹಿಂದಕೆಸೆದು ಬನ್ನಿರಿ,
ಒಂದೆ ಹಣತೆ ತನ್ನಿರಿ,
ಕೃಷ್ಣಾರ್ಪಣವೆನ್ನಿರಿ.
"ಒಂದೆ ನಾಮದಲಡಗಿದವೊ! ಅಡಗಿದವೊ!
ಆನಂದದಿಂದುಸುರುವ ಅಖಿಳ ವೇದಗಳು."
ಮೂಡಿ ಬಂದ ನೇಸರು
ಕೇಳಿ ನೆಲದ ಕೀಸರು
ಕರಗುತಿತ್ತು ತಿಮಿರ ತಿರೆಯ ಮಂಜು ಪರೆಯ ಬೇಸರು.
ನವೋದಯದ ದಿವ್ಯಭಾವ
ಭಾವೋದಯದ ಮುಗಿಲ ಹೂವ
ಚಿನ್ನದ ಚಿನ್ನಾಟವಾಡಿ ಬೆಳಕು ಬಂತು ಭೂಮಿಗೆ!
ಪುಣ್ಯಕರ್ಮ ಸೀಮೆಗೆ!
"चक्षोः सूर्यो अजायंत ॥ "

★

೨

ಅರುಣಗೋಲ ಬಳೆದಿತ್ತು ಚಿನ್ನಗೆಂಪು
ನವೋದಯಕೆ ನಲಿದಿತ್ತು ನೆಲದ ಕಂಪು
ಮರದ ಟೊಂಗಲಿನ ಪರ್ಣಕುಟಿಯ ತೊರೆದು
ಪುರುಷಸೂಕ್ತದುದ್ಘೋಷ ಕಂಠವೆರೆದು
ಹಕ್ಕಿ ಹಾರಿದವು ಮುಗಿಲಪಯಣಕೆಂದು
ಗಂಧವಾಹಿ ತಂಬೆಲರು ಬೀಸಿ ಬಂದು
ನೆಲದ ಕಂಪು ಕುಡಿವೆರೆದು ಬರಲು ಹೂತು
ಹೂವಿನೊಡನೆ ನುಡಿದಿತ್ತು ಲಲ್ಲೆವಾತು.
ದಲದೊಳಿರುವ ಮಕರಂದ ಕುಡಿಯಲೆಳಸಿ

ರೆಂಬೆರೆಂಬೆಗಳ ರಂಗವಲ್ಲಿ ಬಳಸಿ.
ತುಂಬಿ ಬರಲು ಮಕರಂದ ಸೂಕ್ತ ನುಡಿದು
ಮಧುವ್ರತದ ಮಧುಮಾನಿ ಶ್ರುತಿಯ ಹಿಡಿದು.
ಊರ್ಧ್ವಪುಂಡ್ರ ಬಳೆದಿತ್ತು ನೀಲಗಿರಿಯು
ಪಚ್ಚೆ ಪಯಿರುಗಳ ಹೊಲದ ಹಸಿರು ಸಿರಿಯು.
ಸ್ವರ್ಣಗಿರಿಯ ಬೀಸಣಿಕೆ ಬೀಸುತಿರಲು
ವ್ಯೋಮವಲಯದಲಿ ಮೇಘವೀಸುತಿರಲು
ನೆಲದ ಪುಣ್ಯ ನಲಿದಿತ್ತು ಹಸಿರನುಟ್ಟು
ಬಣ್ಣಬಣ್ಣಗಳ ಪುಷ್ಪಮುಕುಟವಿಟ್ಟು
ಕೊಳದ ತುಂಬ ತಾವರೆಗಳರಳಿ ನಿಂದು
ಇಂದ್ರಚಾಪಗಳ ತಳೆದವಮೃತ ಬಿಂದು
ಬನದೊಳುಲಿದ ಕಲಕಲನಿನಾದವಾಣಿ
ನೆನೆದು ನಡೆಯುತಿರೆ ಸ್ವರ್ಣ ಮೇಘರಾಣಿ
ರೌಪ್ಯಪೀಠಪುರವೆಲ್ಲ ಏಳುತಿರಲು
ಗುಡಿಯ ಗಂಟೆ ದುಮುದುಮಿಸಿ ಕೇಳುತಿರಲು
ಹಸುಗಳೆಲ್ಲ ಕೊಟ್ಟಿಗೆಯೊಳೆದ್ದು ಕುಳಿತು
ನೆಗಹಿ ಪುಚ್ಛ! ಮೊಲೆಹಾಲಿನಾಸೆ ತಳೆದು
ಅಂಬೆಗಾಗಿ ಮೊರೆದಿರಲು! ಗೋವು ನಿಂದು
ಕೊಳಲನುಡಿಸಿ ಗೋಪಾಲ ಬರುವನೆಂದು
ಬೆಟ್ಟದಾಚೆ ತಪ್ಪಲಿನ ಹಸಿರೊಳಲೆದು
ಸಸ್ಯಮಾಲಿನೀ ಬನದ ತುತ್ತ ಮೆಲಿದು
ಹಾಡಿ ಹರಿದ ತಿಳಿತೊರೆಯ ನೀರ ಕುಡಿದು
ಬನದ ವಿಹಗ ಕಲಕಲನಿನಾದ ನುಡಿದು
ಮಿಸುನಿ ಲೇಪಗಳ ಬಳೆದ ಕಣಿವೆಯಿಳಿದು
ಹೆಜ್ಜೆಯಿಡಲು ಹಾರೈಸಿ ಹರ್ಷ ತಳೆದು
ರೆಂಬೆರೆಂಬೆಗಳು ಹಾಡಲರುಣಸೂಕ್ತ

ಚಕ್ರವಾಕನುಡಿದಿರಲು ವರುಣಸೂಕ್ತ
ಅರಳಿದಲರು ಪವಮಾನಸೂಕ್ತ ಹಾಡಿ
ದಲವ ತೆರೆದು ಮಕರಂದ ಕಣಜ ನೀಡಿ
ಬಣ್ಣಬಣ್ಣಗಳ ತುಂಡು ಮೋಡವಲೆದು
ಕೆಳಗೆ ಕಡಲ ತವರೂರ ಕಂಡು ನಲಿದು
ಮುಗಿಲ ಪಯಣ ಬೆಳಸಿದವು ಮೇಘವೃಂದ
ಸುಖಸ್ಪರ್ಶಿ ಪವಮಾನ ಬೀಸಿ ಬಂದ
ಬೆಳಗು ಬಂತು ಹರಿದಾಡಿ ಮುಗಿಲನಿಳಿದು
ಬೆಳಗು ಧುಮುಕಿನಡೆದಂತರಿಕ್ಷವಿಳಿದು
ಬೆಳಗು ಬಂತು ದಶದಿಕ್ಕು ತುಂಬಿ ತುಳುಕಿ
ಹೂವಿನೊಡಲ ಮಕರಂದದಲ್ಲಿ ಸಿಲುಕಿ
ನೆಲದಲಂಪು ಬನ ಜಲದಿ ಕಂಪು ತಂದು
ಬೃಹದ್ರೂಪಸೌಂದರ್ಯ ತಳೆದು ನಿಂದು
ನೆಲದ ತಾಯಿ ಹೊಂಬಿಸಿಲು ಧಾರೆ ಮಿಂದು
ಹಾಡಿ ಹರಸುತಿರೆ ಧನ್ಯಳಾದೆನೆಂದು
ಅನಂತೇಶ್ವರದ ಪೌಳಿಯಿಳಿದು ಬಂದು
ಅಲವಬೋಧ ಆನಂದತೀರ್ಥರಂದು
ನಡೆಯುತಿರಲು ಕಡಲಲ್ಲಿ ಮೀಯಲೆಂದು

**"वंदे वंद्यं सदानंदं वासुदेवं निरंजनम् ।
इंदिरापतिमाद्यादिवरदेशवरप्रदम् ॥
नमामि निखिलाधीश किरीटाधृष्टपीठवत् ।
हृत्तमश्शामनेर्काभं श्रीपतेः पादपंकजम् ॥"**

(ವಂದೇ ವಂದ್ಯಂ ಸದಾನಂದಂ ವಾಸುದೇವಂ ನಿರಂಜನಂ
ಇಂದಿರಾಪತಿ ಮಧ್ಯಾದಿವರದೇ ವರಪ್ರದಮ್
ನಮಾಮಿ ನಿಖಿಲಾಧೀಶ ಕಿರೀಟಾಧೃಷ್ಟಪೀಠವತ್ ।
ಹೃತ್ತಮಃ ಶಾಮನೇರ್ಕಾಭಂ ಶ್ರೀಪತೇಃ ಪಾದಪಂಕಜಮ್)

ಮಣ್ಣು ಪುಣ್ಯ ಪಡೆದಿತ್ತು ಹೆಜ್ಜೆಯಿಡಲು
ಯತಿಯು ಕಾಣಲುದ್ಘೋಷಿಸಿತ್ತು ಕಡಲು
ಪರಮಹಂಸರನು ಕಂಡ ಪುಣ್ಯವೆಂದು
ಚರಾಚರಗಳಲೆದಾಡದಂತೆ ನಿಂದು
ನೋಡುತಿರಲು ಕಣ್ಣಲ್ಲಿ ಕಣ್ಣನಿಟ್ಟು
ವಾಯುದೇವರವತಾರ ಬೆರಗುವಟ್ಟು
ಅರುಣಗೋಲ ನಡೆದಂತೆ ಕಾವಿಯುಟ್ಟು
ತಪದ ದಿವ್ಯ ಸೌಂದರ್ಯ ರೂಪ ತೊಟ್ಟು
ತುಂಬುದೇಹ ನಿಡಿದೋಳು ಚಂದ್ರವದನ
ಪರಮಹಂಸ ನಡೆದಿರಲು ಕಮಲನಯನ
ಯತಿಯು ರೂಪಸೌಂದರ್ಯ ನಿಂತ ನಿಲವು
ಚೆಲುವಿಗೊಂದು ಚೆಲುವಾಗಿ ಬಂತು ಚೆಲುವು
ಹರಿಚರಣಕಮಲ ಮಕರಂದಮಗ್ನರಾಗಿ
ಧವಲಭಕ್ತಿ ಸೌಂದರ್ಯ ರೂಪಯೋಗಿ
ಅಗ್ನಿವಲ್ಕಲವನುಟ್ಟ ಪುಣ್ಯ ರೂಪ
ವಿಷ್ಣುಭಕ್ತಿ ಬೆಳಗಿಸಿದ ರತ್ನದೀಪ
ಚೆಲುವು ಬಂತು ಲುಳಿ ಮಸಗಿ ಕಣ್ಣು ತುಂಬ.
ಬೆಳಕು ಬೇಡಿದವು ಸೂರ್ಯ ಚಂದ್ರ ಬಿಂಬ
ಕಲ್ಯಾಣ ಪೂರ್ಣ ಪರಮಾತ್ಮನನ್ನು ಸ್ಮರಿಸಿ
ಬಿಂಬರೂಪನೊಳಗಣ್ಣು ಮುಂದಕಿರಿಸಿ
ಪದ್ಮನಾಭ ಪದಪದ್ಮಗಳಿಗೆ ನಮಿಸಿ
ಹಾಡಿ ಹೆಜ್ಜೆಯಿಡುತಿರಲು ಮಿಾಯಲೆಂದು
"कुरु भुंक्ष्व च कर्म निजं नियतं ।
हरिपादविनम्रधिया सततम् ॥
हरिरेव परो हरिरेव गुरु।
हरिरेव जगत्पितृमातृगतिः ॥ "

ಹರಿಯು ನೆನೆದೆ ಹರಿದಿತ್ತು ಗಾಳಿ ಕಡಲು
ಹರಿಯು ನೆನೆದೆ ಸುರಿದಿತ್ತು ಮುಗಿಲ ಮಡಿಲು
ಹೆಜ್ಜೆಗೊಮ್ಮೆ ಹಾವುಗೆಯ ಸದ್ದು ಕೇಳಿ
ನೀಲ ಜಲಧಿಯುದ್ಘೋಷ ನಲಿವು ತಾಳಿ
ಪರಿವ್ರಾಜಕಾಚಾರ್ಯರೊಲಿದು ಬರಲು
ಕಡಲ ತೆರೆಗಳೆದ್ದೆದ್ದು ಕುಣಿಯುತಿರಲು
ಕಲ್ಪ ಕಲ್ಪಗಳ ಮೂಲರೂಪವರಿತು
ದೇವಸೂಕ್ತದುದ್ಘೋಷದಲ್ಲಿ ಬೆರೆತು
ಹಾಡಿ ಹಲುಬಿ ಭಗವಂತನನ್ನೆ ಕುರಿತು
ದೇವಧ್ಯಾನ ತಲ್ಲೀನರಾಗಿ ನಡೆದು
ಹರಿಯಪಾರ ಕಲ್ಯಾಣ ಗೀತ ನುಡಿದು
"शृणुतामलसत्यवचः परमं ।
शपथेरितमुच्छ्रितबाहुयुगम् ॥
न हरेः परमो न हरेः सदृशः ।
परमः स तु सर्वचिदात्मगणात् ॥"
ನೀಲ ಜಲಧಿಯುದ್ಘೋಷಕೊಲಿದು ಬಂದು
ಅಲವಬೋಧ ಆನಂದತೀರ್ಥರಂದು
ಕಡಲ ತಡಿಗೆ ಬಂದಿರಲು ಮೀಯಲೆಂದು
ಮಳಲು ಹೊನ್ನ ಹುಡಿಯಾಗಿ ಹೊಳೆಯುತಿತ್ತು
ಕಡಲು ಹಾವುಗೆಯ ಕಣವ ತೊಳೆಯುತಿತ್ತು
ತಡಿಗೆ ಬಂದು ನೋಡಿದವು ತರತರಂಗ.
ಯತಿಗೆ ನಮಿಸಿ ನಲಿದಿತ್ತು ವರುಣರಂಗ
ಅಂತಪಾರವಿರದಂಥ ಕಡಲ ಕಂಡು
ವ್ಯೋಮವಲಯದೊಳಗೀಸಿ ದಣಿದುಕೊಂಡು
ಸಾಲು ಸಾಲು ಬೆಳ್ಳಕ್ಕಿವಿಂಡು ಬರಲು
ಮಳಲ ತಡಿಗೆ ಹೊಂಬೆಳಗು ತೂರುತಿರಲು

ಪರಿವ್ರಾಜಕಾಚಾರ್ಯ ಮಿಂದು ಬಂದು
ಊರ್ಧ್ವ ಪುಂಡ್ರ ಹರಿನಾಮ ಬಳೆದುಕೊಂಡು
ಸವಿತೃಮಂಡಲದ ಸ್ವರ್ಣ ಮಧ್ಯವರ್ತಿ
ಕೇಯೂರ ಕುಂಡಲಾಭರಣಬಿಂಬಮೂರ್ತಿ
ಪ್ರಣವವೇದ್ಯ ಪರಮಾತ್ಮನನ್ನೆ ಕಂಡು
ನೆನೆದು ಮಳಲ ತಡಿಯಲ್ಲಿ ನಿಂತುಕೊಂಡು
ಅರ್ಘ್ಯವಿತ್ತು ಪದ್ಮಾಸನಸ್ಥರಾಗಿ
ದೇವಧ್ಯಾನ ತಲ್ಲೀನ ಚಿತ್ತರಾಗಿ
ತಡಿಗೆ ಕುಳಿತು ಪ್ರಾರ್ಥಿಸಲು ಮಧ್ವಮುನಿಯು
ಅಡಗಿ ಮೌನವಾಗಿತ್ತು ಕಡಲದನಿಯು
ಅಗ್ನಿವಲ್ಕಲವನುಟ್ಟ ಪುಣ್ಯರೂಪ
ವಿಷ್ಣುಭಕ್ತಿ ಬೆಳಗಿಸಿದ ರತ್ನದೀಪ
ಸ್ವರ್ಣವಲಿಯ ಹೆಣೆದಿತ್ತು ಬೆಳಕು ಬಂದು
ಧ್ಯಾನಕಿರಲಿಯಿದು ಶಿರಶ್ಚಕ್ರವೆಂದು
ಚರಣಕಮಲಗಳಿಗೆರಗಿ ಸೂರ್ಯನಿಂದು
"ಆನಂದತೀರ್ಥ ಓ ನಮೋ ಮಣಿದೆನೆಂದು
ಧವಲಭಕ್ತಿ ಸೌಂದರ್ಯರೂಪವೆಂದು
ನೊಸಲ ಬೆಳಗಿತಾನಂದದಮೃತ ಬಿಂದು
ಪ್ರಣವವೇದ್ಯ ಪರಮಾತ್ಮನನ್ನೆ ಕಂಡು
ಹೃದಯ ತುಂಬಿ ತುಳುಕಿತ್ತು ದೇವ ಕರುಣೆ
ನಾದಲೋಲ ಗೋಪಾಲಕೃಷ್ಣ ಸ್ಮರಣೆ.
ಸೃಷ್ಟಿ ಕರ್ತನಿಗೆ ಸೃಷ್ಟಿ ನಾಭಿ ಕಮಲ
ಅಷ್ಟದಲವ ತೆರೆದಿತ್ತು ಪ್ರಾಣ ಕಮಲ
ಕಮಲದಲ್ಲಿ ಹೊಳೆದಿತ್ತು ಸೂರ್ಯ ಬಿಂಬ
ಸೂರ್ಯನಲ್ಲಿ ಹೊಳೆದಿತ್ತು ಚಂದ್ರ ಬಿಂಬ
ಚಂದ್ರನಲ್ಲಿ ಉರಿದಿತ್ತು ಅಗ್ನಿ ಬಂದು

ಜಾತವೇದ ಸಂಜಾತ ಪೀಠವೆಂದು
ಹೃದಯ ತುಂಬಿ ತುಳುಕಿತ್ತು ದೇವ ಕರುಣೆ
ನಾದಲೋಲ ಗೋಪಾಲಕೃಷ್ಣ ಸ್ಮರಣೆ.
ಸ್ವರ್ಣಮುಕುಟದಲಿ ನೀಲ ನವಿಲು ಗರಿಯು
ಕಮಲವದನ ಕಮಲಾಕ್ಷ ಕೃಷ್ಣ ಹರಿಯು
ಕರ್ಣ ಕುಂಡಲಾಭರಣ ಭುಜಕಿರೀಟ
ರತ್ನ ಮಾಲೆಯಲಿ ಸಪ್ತವರ್ಣದಾಟ
ಘನಶ್ಯಾಮ ನರಿಷಿಣದ ವಸನವುಟ್ಟು
ಹಿಡಿದು ಕೊಳಲ ಚೆಂದುಟಿಯ ತುದಿಯೊಳಿಟ್ಟು
ನಾದ ಲೋಲ ಗೋಪಾಲಕೃಷ್ಣ ಬಂದು
ಪ್ರಾಣಕಮಲದಲಿ ಕೊಳಲನೂದಿದಂದು
ಅಂತರಂಗ ಭಗವಂತರಂಗವಾಗಿ
ಉಕ್ಕೇರಿ ಬಂದಿತಾನಂದ ಜಲಧಿಯಾಗಿ
ಕಡಲರಂಗ ರಿಂಗಣಿಸುತಿತ್ತು ಮೊಳಗಿ
ವಿಷ್ಣುಭಕ್ತಿ ನವರತ್ನದೀಪ ಬೆಳಗಿ
“मद्भक्ता यत्र गायंति तत्र तिष्ठामि”
ಮುಗಿದ ಕಣ್ಣು ತೆರೆದಿರಲು ಹರ್ಷದಿ ಎಂದು
ಹಣೆಗೆ ಮೂಡಿ ಹೊಳೆದಿರಲು ಭಕ್ತಿ ಬಿಂದು
ಬಾಲಕೃಷ್ಣ ಬಲರಾಮ ಬರುವರೆಂದು
ಬೀಸಿ ಬಂತು ಬಿರುಗಾಳಿ ಕಡಲ ತುಂಬ
ಮೋಡವೀಸಿ ಕವಿದಿತ್ತು ಸೂರ್ಯಬಿಂಬ
ಕಡಲು ನಲಿದು ಉಕ್ಕೇರಿತೆದ್ದು ನಿಂದು
ನಿಡುಸುಯ್ಯುತಿರಲು ಬಿರುಗಾಳಿ ಬೀಸಿ ಬಂದು
ತೆರೆಗಳೆದ್ದು ಕುಣಿದಿರಲು ಕಡಲ ತೂರಿ
ಕಡಲ ತಲವ ಕಲುಕಿತ್ತು ಧಿಗ್ಗನೇರಿ
ಜಲಧಿ ಕುಣಿಯಿತೆದ್ದೆದ್ದು ಬರಲು ಗಾಳಿ

ಬೀಸುತಿರಲು ವಿಕಟಾಟ್ಟಹಾಸ ತಾಳಿ
ಹೊಯ್ಯುತಿತ್ತು ನಿಡುಸುಯ್ಯುತಿತ್ತು ಬೀಸಿ
ಸೂರ್ಯ ಬಿಂಬ ಕವಿದಿತ್ತು ಮೋಡವೀಸಿ
ಬೊಬ್ಬೆಯಿಟ್ಟಿತುದ್ವೇಗ ತುಂಬಿ ಕಡಲು
ಮತ್ತನಂತೆ ಹೊಯ್ದಾಡಿತದರ ಒಡಲು
ಉನ್ಮತ್ತರಂತೆ ಕುಣಿದಾಡಿ ಬಂತು ಕೆರಳಿ
ತರತರಂಗ ಕುಪ್ಪಳಿಸಿ ಬಂದವುರುಳಿ
ಜಲಗಭೀರ ಝಂಝಾಸಮೀರ ಬರಲು
ಹೊಯ್ಯುತಿರಲು ಜಿಗಿದೇಳುತಿತ್ತು ಕಡಲು
ವರುಣ ರಂಗದಲಿ ರುದ್ರನಾಟ್ಯವಾಡಿ
ಗಾಳಿ ಗುಲ್ಲನೆಬ್ಬಿಸಲು ನೀರ ನೋಡಿ
ತಡಿಗೆ ಕುಳಿತ ಬೆಳ್ಳಕ್ಕಿವಿಂಡು ಹೆದರಿ
ಜೀವ ಭಯಕೆ ದಿಗ್ದೆಸೆಗಳಲ್ಲಿ ಚೆದರಿ
ಕಡಲ ಕಂಡು ಹೊಯ್ದಾಡಿ ಮರಗಳುದುರಿ
ಭೀತವಾಗಿ ಸುವಿನೀತವಾಗಿ ಮುದುರಿ
ನಡುಗುತಿರಲು ಹೊಯ್ದಾಡಿ ತೆಂಗುಸಾಲು
ಗರಿಗಳೆದ್ದು ಗಾಳಿಯಲಿ ಕಡಲ ಪಾಲು
ದೂರದಲ್ಲಿ ಬರುತಿರಲು ಹಡಗವೊಂದು
ಕಡಲಯಾನ ಕೈಕೊಂಡು ತೇಲಿ ಬಂದು
ದೇವಯಾತ್ರಿಕರ ದಂಡೆಗಿಳಿಸಲೆಂದು
ಕಡಲು ಕೆನೆದು ಕುಣಿದಾಡುತಿತ್ತು ಕೂಗಿ
ನಾವೆಯುಯ್ಯಲಾಡಿರಲು ತೆರೆಗೆ ತೂಗಿ
ಹೊಯ್ಯುತಿರಲು ಪವಮಾನ ಬೀಸಿ ಬಂದು
ವರುಣನಿಲಯದಲಿ ಹಡಗವೀಸಿ ನಿಂದು
ಹಾಯಿ ಹರಿದು ಪಟಪಟಿಸುತಿತ್ತು ಮೇಲೆ
ನಾವೆಯೊಳಗೆ ಧುಮುಕಿತ್ತು ನೊರೆಯ ಮಾಲೆ

ಪ್ರಾಣಭಯಕೆ ಕಳವಳಿಸಿ ತುಂಬ ನೊಂದು
ಹಡಗಿನೊಡೆಯ ಹಲುಬಿದನು ನಡುಗಿ ನಿಂದು

★

ಪವಮಾನಸೂಕ್ತ

ಒಮ್ಮೆಲೆ ಒಮ್ಮೆಲೆ ಬೀಸಿ ಬಂದ ಗಾಳಿಗೆ
ಹೊಯ್ಯುತಿರುವ ಸುಯ್ಯುತಿರುವ ವರುಣನ ವೈಹಾಳಿಗೆ
ದಿಗ್ದೆಸೆಗಳ ಕದಡಿ ಬರುವ ತೆರೆಗಳಿಡುವ ದಾಳಿಗೆ
ತೊಟ್ಟಿಲಂತೆ ತೂಗುತಿತ್ತು ಹಡಗು ನಿಂತಲ್ಲಿಯೆ
ಕೇಕೆಯಿಟ್ಟು ಕೂಗುತಿತ್ತು ಗಾಳಿ ಬಂದು ಅಲ್ಲಿಯೆ
ಹಾಯಗೋಲು ಮುರಿದು ಬಿತ್ತು
ಕಟ್ಟಿದರಿವೆ ಹರಿದು ಬಿತ್ತು
ಕಡಲು ಬಾಯ ತೆರೆಯುತಿತ್ತು
"ಜಲಸಮಾಧಿಯಿಲ್ಲಿಯೆ."
ನಾವು ಕಡಲ ಪಥಿಕರು
ನೀವೆ ನಮ್ಮ ರಥಿಕರು.
वृत्रहा । अमित्रहा । ಸೌಮ್ಯನಾಗು ವಾಯುವೆ!
वैनतेय सोमं पिब । ನೀನೆ ನಮ್ಮ ಕಾಯುವೆ! ॥೧॥
ಹೊಯ್ಯುತಿತ್ತು ಸುಯ್ಯುತಿತ್ತು ಗಾಳಿಗೆಂಥ ಕೋಪವು?
ವಿಕಟಹಾಸ್ಯ ರುದ್ರಲಾಸ್ಯವಾಡುತಿಹುದೆ ಶಾಪವು?
ಅರುಣನುದಯ ಕಾಲದಲ್ಲಿ ವರುಣಗೇಕೊ ತಾಪವು
ಕಡಲನಾಭಿಕಮಲದಿಂದ ಬರಲಿ ಪವನ ಧೂಪವು
ಇರುಳ ಗೆಲಿದು ಬೆಳಗುತಿದೆ ಮುಗಿಲ ರತ್ನದೀಪವು
ನಾವೆಯಲ್ಲಿ ಕಡಲದಾರಿ
ಜಲತರಂಗ ಪಥವ ಕೋರಿ

ಕಡಲ ಪಯಣಕಿಳಿದೆವು,
   ವರುಣ ಮಾರ್ಗ ತುಳಿದೆವು.
ನಾವು ಕಡಲ ಪಥಿಕರು,
   ನೀವೆ ನಮ್ಮ ರಥಿಕರು.
वृत्रहा । अमित्रहा । ಸೌಮ್ಯನಾಗು ವಾಯುವೆ !
   वैनतेय सोमं पिब । ನೀನೆ ನಮ್ಮ ಕಾಯುವೆ !   ॥೨॥
ಗಾಳಿಯೊಲವ ನಂಬಿ ನಡೆದು ಶರಣು ಬಂದೆ ನಿಮ್ಮನು
   ನಮ್ಮ ನೂರು ಪಾಪ ಮರೆತು ಸಲಹಬೇಕು ನಮ್ಮನು
ಹಡಗು ಹೊರುವ ಚಿನ್ನರನ್ನವೆಲ್ಲ ನಿನ್ನೊಳರ್ಪಣ
   ಕಡಲು ಕುಣಿಸಿದಂಥ ತೆರೆಗಳೆಲ್ಲ ನಿನ್ನ ತರ್ಪಣ
ಸರ್ವವ್ಯಾಪಿಯಾದ ನೀನು ಭಗವಂತನ ದರ್ಪಣ.
   ಕಡಲು ತಂದ ಕುತ್ತ ಕಳೆದು
ನಮ್ಮೊಳೊಲವು ಕರುಣೆ ತಳೆದು
   ಅಭಯ ಹಸ್ತ ವರದ ಮುದ್ರೆ
ನೀಡು, ಓ ಸಮುದ್ರ ರುದ್ರ !
   ನಾವು ಕಡಲ ಪಥಿಕರು,
ನೀವೆ ನಮ್ಮ ರಥಿಕರು.
   वृत्रहा । अमित्रहा । ಸೌಮ್ಯನಾಗು ವಾಯುವೆ !
वैनतेय सोमं पिब । ನೀನೆ ನಮ್ಮ ಕಾಯುವೆ   ॥೩॥
   ಹಡಗಿನೊಡೆಯ ಹಲುಬಿರಲು ದೀನನಾಗಿ
ಕಣ್ಣು ತೆರೆದು ನೋಡಿದರು ಧ್ಯಾನಯೋಗಿ
   ಮೂಡಿಬಂದಿತನುಕಂಪ ಧಾರೆಯೆರೆದು
ಅಮೃತಸೃಷ್ಟಿಯಲಿ ದಿವ್ಯದೃಷ್ಟಿ ತೆರೆದು
   ಧ್ಯಾನಕೊಲಿದು ಮನಸೋತು ಯತಿಯ ಚಿತ್ತ
ಹರಸಿ ಬಂದಿತನುರಾಗ ಕಡಲ ಸುತ್ತ
   ಜನನ ಮರಣಗಳ ತೆರೆಯ ತೆಕ್ಕು ಮುಕ್ಕು

ಬಂದ ಜೀವ ಸುಳಿಸುಳಿಯೊಳಲೆದು ನೆಕ್ಕು
ಭವಸಮುದ್ರದಲಿ ಎಲ್ಲೊ ತೇಲಿ ನಡೆದು
ಮರಣ ಭಯಕೆ ಸೆರೆ ಹುಲ್ಲನೊಂದು ಹಿಡಿದು
ದಿಕ್ಕು ತಪ್ಪಿ ಕಳವಳಿಸಿ ಕನಲುವಂತೆ
ಹಡಗಿನೊಡೆಯು ಹಲುಬಿರಲು ದೀನನಂತೆ
ಕರುಣೆ ಮೂರ್ತಿವೆತ್ತಂತೆ ಕುಳಿತ ಯೋಗಿ
ಅಂತರಂಗದೊಳನಂತಮುಗ್ನರಾಗಿ
ಮಳಲ ತಡಿಗೆ ಕುಳಿತಲ್ಲೆ ಕುಳಿತುಕೊಂಡು
ನಾದಲೋಲ ಹರಿರೂಪ ನೆನೆದುಕೊಂಡು
"ಸೌಮ್ಯನಾಗು" ಎಂದುಸುರಿ ಕಡಲ ಕಂಡು
ಹೊದೆದ ಕಾವಿಯನು ಕೈಯೊಳಿರಿಸಿಕೊಂಡು
ಬೀಸುತಿರಲು ಆನಂದ ತೀರ್ಥರಂದು
ಗಾಳಿಗೊಳಲ ಗಾರುಡಿಗೆ ಸೋತು ಬಂದು
ಮುಸುಕು ಮಾಯವಾಗಿತ್ತು ಗಾಳಿನಿಂದು
ರಾಗವಳಿದು ವೈರಾಗ್ಯ ಮೂಡುವಂತೆ
ಅತ್ತ ಕೂಸು ನಸುನಕ್ಕು ನೋಡುವಂತೆ
ಮೆಲ್ಲ ಮೆಲ್ಲನಲೆದಿತ್ತು ವರುಣನೊಡಲು
ಸ್ತಬ್ಧ ಶಾಂತವಾಗಿತ್ತು ಕ್ಷುಬ್ಧ ಕಡಲು
ಕಾವಿ ಬೀಸಿದೆಡೆಗೀಸಿ ಹಡಗು ಬರಲು
ರಾಜಹಂಸ ನಡೆದಂತೆ ತೇಲುತಿರಲು
ಹಡಗು ನಲಿದು ನಿಂತಿತ್ತು ತೆರೆಯೊಳಾಡಿ
ಮಂದಗಾಳಿ ನಡೆದಿತ್ತು ಲಾಲಿ ಹಾಡಿ
ಹಡಗಿನೊಡೆಯು ಬೆರಗಾಗಿ ನೋಡುತಿರಲು
ಕಾವಿಬೀಸಿದೆಡೆ ಹಡಗವೋಡುತಿರಲು
ಗಾಳಿಗೊಳಲಗಾರುಡಿಗೇ ಚಿತ್ತವೊಲಿದು
ಹಡಗು ಹಂಸಗತಿಯಲ್ಲಿ ತೆರೆಯೊಳಲೆದು

ಮುಳಲ ತಡಿಯ ತೆರೆಯಲ್ಲಿ ನಿಂತಿತಂದು
ತಡಿಗೆ ಕುಳಿತ ತೇಜಸ್ವಿಯತಿಯ ಕಂಡು
'ಇವರೆ ನಮ್ಮ ರಕ್ಷಕರು' ಎಂದು ಕೊಂಡು
ಹಡಗಿನೊಡೆಯ ಬೆರಗಾಗಿ ಬಂದನಿಳಿದು
ಅಂತರಂಗದಲಿ ದೀನಭಾವ ತಳೆದು
ವಿನಯಪೂರ್ಣ ಭಯಭಕ್ತಿ ತುಂಬಿ ತುಳುಕಿ
ಪುಣ್ಯಜೀವದಲಿ ದೈನ್ಯಭಾವ ಬಳುಕಿ
ಪಾದಪದ್ಮಗಳಿಗೆರಗಿ ನಿಂದು ನಲಿದು
ಅಲವಬೋಧರಿಗೆ ನುಡಿದ ಕೈಯ ಮುಗಿದು
"ನಮಸ್ಕಾರ ಕಾರುಣ್ಯ ಕಲ್ಪತರುವೆ
ಪರಿವ್ರಾಜಕಾಚಾರ್ಯ ಪರಮಗುರುವೆ
ಕಡಲು ಗಾಳಿಗಳ ಕೈಗೆ ಸಿಕ್ಕು ದಣಿದು
ಪಯಣ ಹೊರಟು ನಿಮ್ಮೆಡೆಗೆ ಬರಲು ಮಣಿದು
ಹಡಗು ಹಲುಬಿ ಹೊಯ್ದಾಡುತಿರುವುದರಿತು
ಮೂಡಿ ಬಂದಿತನುಕಂಪ ನಮ್ಮ ಕುರಿತು
ನಾವೆಗೊದಗಿ ಬಂದಿರಲು ಕಡಲಕುತ್ತು
ನೀವೆ ನಮ್ಮ ಸಲುಹಿದಿರಿ ಸುತ್ತುಮುತ್ತು
ಕರುಣೆ ರೆಕ್ಕೆವಡೆದಿತ್ತು ಕಾವಿ ಬೀಸಿ
ಹಡಗು ದಡವ ತಲುಪಿತ್ತು ಕಡಲವೀಸಿ
ಜನ್ಮ ಜನ್ಮಗಳ ಪುಣ್ಯ ಕೂಡಿ ಬಂದು
ಪರಮಹಂಸ ದರ್ಶನವು ಒದಗಿತಿಂದು.
ಪರಿವ್ರಾಜಕಾಚಾರ್ಯ ಕರುಣೆಯಿರಲು
ನೂರು ಕಡಲನೀಸೇವು ನಮಿಸಿ ಬರಲು
ಹಡಗು ಹೊತ್ತ ವೈಡೂರ್ಯ ವಜ್ರವುಂಟು
ಮುತ್ತುಹವಳ ನವರತ್ನ ಮಾಲೆಯುಂಟು
ಪರಮಹಂಸವರ ಪರಿಗ್ರಹಿಸಬೇಕು
ಅನುಗ್ರಹಿಸಬೇಕು"

ಹಡಗಿನೊಡೆಯ ಹಂಬಲಿಸಿ ನುಡಿಯುತಿರಲು
ಆನಂದಬಾಷ್ಪಗಳ ಕೋಡಿಯೊಡೆದು ಬರಲು
ವರದ ಹಸ್ತವನು ನೀಡಿ ಹರಕೆಯಂದು
ಅಲವಬೋಧ ಆನಂದತೀರ್ಥರಂದು
ಮುತ್ತು ರತ್ನಗಳ ಮಂದಹಾಸ ತಳೆದು
ದಿವ್ಯ ಪಯಣಿಗರು ಬಂದುದನ್ನು ತಿಳಿದು
ಬಾಲರೂಪಿ ಭಗವಂತನನ್ನೆ ಕಂಡು
ಬಂದನುಡುಪಿಯಲಿ ವಾಸಕೆಂದುಕೊಂಡು
ಸಾಧು ಸಜ್ಜನರ ಪುಣ್ಯ ಫಲಿಸಿತೆಂದು
ಹೃದಯ ತುಂಬಿತಾನಂದ ರೂಪ ನಿಂದು.
ನುಡಿದರಾತನಿಗೆ,
"नाहं कर्ता हरिः कर्ता तत्पूजा कर्मचाऽखिलम् ।
ಎಲ್ಲ ನಿಮ್ಮ ಪುಣ್ಯ
ಹರಿಯಪಾರ ಕಾರುಣ್ಯವಿಹುದಗಣ್ಯ,
ಎಲ್ಲ ಹರಿಯ ಸಂಕಲ್ಪ ನಮ್ಮದೇನು?
ಕಡಲ ತೆರೆಗಳಲಿ ನಮ್ಮ ನಿಮ್ಮದೇನು?"
ಪರಿವ್ರಾಜಕಾಚಾರ್ಯವಾಣಿ ಕೇಳಿ
ಪುಣ್ಯಜೀವ ಪಾವನತೆ ವಿನಯ ತಾಳಿ
ಗಾಳಿಗೊಳಲಗಾರುಡಿಗೆ ತೆರೆಯ ತುಳಿದು
ಹಡಗು ಹಂಸಗತಿಯಲ್ಲಿ ಕಡಲನಳೆದು
ದಡಕೆ ಕ್ಷೇಮದಲಿ ತಲುಪಿದಂತೆ ಬಂದು
ಹಡಗಿನೊಡೆಯ ಹಂಬಲಿಸಿ ನುಡಿದನಂದು,
"ಎಲ್ಲ ದೇವ ಸಂಕಲ್ಪ ಸತ್ಯ ಗುರುವೆ,
ಗುರುಹಸಾದವಿರಲೆಂದು ನಮಿಸುತಿರುವೆ.
ಪರಮಹಂಸವರ ಪರಿಗ್ರಹಿಸಬೇಕು,
ಅನುಗ್ರಹಿಸಬೇಕು"

ಹರಿಯಪಾರಕಲ್ಯಾಣರೂಪ ಸ್ಮರಿಸಿ
ಹೃದಯಕಮಲದಲಿ ಬಿಂಬರೂಪವಿರಿಸಿ
ಅಲವಬೋಧಯತಿ ಮೆಲ್ಲನೆದ್ದು ನಿಂದು
ಹಡಗಿನೊಡೆಯನಿಗೆ ಅನುಗ್ರಹಿಸಲೆಂದು
ಬಾಲಕೃಷ್ಣನನು ಪರಿಗ್ರಹಿಸಲೆಂದು
"ಮುತ್ತು ಹವಳ ನವರತ್ನ ನಮಗೆ ಬೇಡ
ಹಡಗು ಹೊತ್ತ ವೈಡೂರ್ಯ ವಜ್ರ ಬೇಡ
ನಮ್ಮ ಮುತ್ತು ಹರಿನಾಮ ರೂಪ ಸ್ಮರಣೆ
ರತ್ನ ಹವಳ ಭಗವಂತನಿತ್ತ ಕರುಣೆ.
ದ್ವಾರಕಾ ನಗರದಿಂದ
ನಿಮ್ಮ ಹಡಗು ಹೊತ್ತು ತಂದ
ಗೋಪಿಚಂದನದ ಗಡ್ಡೆ
ಎರಡು ನಮಗೆ ಬೇಕಿವೆ
ಅಷ್ಟೆ ನಮಗೆ ಸಾಕಿವೆ."
ನುಡಿದ ಯತಿಯ ಮಾತು ಕೇಳಿ
ಮನದ ತುಂಬ ಹರುಷ ತಾಳಿ
ಮುನಿಯ ಸೇವೆ ಸಲ್ಲಲೆಂದು
ಮುತ್ತು ರತ್ನ ಒಲ್ಲರೆಂದು
ಅವರು ಮಾತ್ರ ಬಲ್ಲರೆಂದು
ಹಡಗಿನೊಡೆಯ ನಾವೆಯೇರಿ
ಗೋಪೀಚಂದನದ ಭಾರಿ
ಗಡ್ಡೆಯೆರಡ ಹೊರಿಸಿ ತಂದು
ಕಡಲ ತೀರದಲ್ಲಿ ಬಂದು
ಮುನಿಯ ಮುಂದಕಿರಿಸಿ ಮಣಿದು
ತೃಪ್ತರಾದೆವೆಂದು ತಣಿದು
ಪರಮಹಂಸ ಸೇವೆಯೆಂದು

ಗುರುಹಸಾದ ಹರಕೆಯೆಂದು
ಚರಣಕಮಲಕೆರಗಿ ನಿಂದು
ಹಡಗಿನೊಡೆಯ ನುಡಿದನು
“ಪರಮಗುರುವೆ ಹೋಗಿ ಬರುವೆ
ನಾವು ನಮ್ಮ ಊರಿಗೆ,
ತೆರಳುತಿರುವೆ ಮರಳುತಿರುವೆ
ನಮ್ಮ ಕಡಲದಾರಿಗೆ.
ನಿಮ್ಮ ಕೈಯ ಮುಷ್ಟಿಯಲ್ಲಿ
ದುಷ್ಟ ದಮನ ಶಕ್ತಿಯು,
ನಿಮ್ಮ ದಯಾ ದೃಷ್ಟಿಯಲ್ಲಿ
ಪುಣ್ಯಜೀವ ಮುಕ್ತಿಯು.
ಗಾಳಿ ನಿಮ್ಮ ದಂಡಧಾರಿ
ಕಡಲಿದುವೆ ಕಮಂಡಲು,
ಪರಮಯತಿಯೆ ಪೂರ್ಣಮತಿಯೆ
ನಮಸ್ಕಾರ ಬರುವೆವು.
ಕಡಲಗುರಿಯ ತೆರೆಯದಾರಿ
ತೆರೆನೊರೆಗಳ ಬೆನ್ನನೇರಿ
ದಂಡೆಗಿರುವ ನಾಡಸೇರಿ
ಮುತ್ತು ರತ್ನ ತರುವೆವು.”
ನಮಸ್ಕರಿಸಿ ಮತ್ತೆ ಮತ್ತೆ
ಕಡಲನೇರಿ ಹಡಗು ಹತ್ತಿ
ಮರಳಿ ಪಯಣ ನಡೆದರು
ವರಣ ಪಥವ ಹಿಡಿದರು.
ಅಲವಬೋಧ ಆನಂದತೀರ್ಥರಂದು
ಗೋಪಿಚಂದನದ ಗಡ್ಡೆಯೆರಡತಂದು
ಬಾಲಕೃಷ್ಣ ಬಲರಾಮ ಬಂದರೆಂದು

ಮನದಲಂಪುಗಡಲುಕ್ಕಿ ಮೇರೆವರಿದು
ಆನಂದತೀರ್ಥರಾನಂದಬಾಷ್ಪ ಸುರಿದು
ಬಾಲಕೃಷ್ಣ ಬಲರಾಮ ಬಂದುದರಿತು
ಗೋಪಿಚಂದನದ ಗಡ್ಡೆಯೊಂದ ತೆರೆದು,
ಮರೆಯೊಳಿರುವ ಬಲರಾಮನನ್ನೆ ಕಂಡು
ಕಡಲತೀರ ಕಾಪಾಡಲೆಂದುಕೊಂಡು
ಕಡಲತಡಿಯ ವಡಬಂಡಿಯಲ್ಲಿ ನಿಂದು
ಧೇನಿಸಿರಲು ಜನರೆಲ್ಲ ಓಡಿಬಂದು
ಬಾಲರೂಪಿ ಬಲರಾಮನನ್ನೆ ಕಂಡು
ಅನುಗ್ರಹಿಸಿ ನಮ್ಮೂರನೆಂದುಕೊಂಡು
ಚರಣಕೆರಗಿ ಹಂಬಲಿಸಿ ಪ್ರಾರ್ಥಿಸಿರಲು
ಊರಿಗೂರೆ ಕೈಮುಗಿದು ಕೇಳುತಿರಲು,
ಬಾಲರೂಪಿ ಬಲರಾಮನನ್ನೆ ತೆರೆದು
ಕ್ಷೀರಾಭಿಷೇಕ ವರುಣಾಭಿಷೇಕವೆರೆದು
ವೇದಸೂಕ್ತದುದ್ಘೋಷ ಜಲವ ಸುರಿದು
ಪ್ರತಿಷ್ಠಾಪಿಸಿದರಲ್ಲಿ ಕಡಲತಡಿಗೆ
ಆನಂದತೀರ್ಥರಾನಂದ ಘೋಷದೊಡನೆ,
"ಕಡಲತಡಿಯ ಕಾಯುತ
ನಿಲ್ಲು ಬಾ ಹಲಾಯುಧ!
ನೇಗಿಲದಲಿ ನದಿಯ ಸೆಳೆದ
ರೌಹಿಣೇಯ ನಿಲ್ಲು ಬಾ.
ದೈತ್ಯಕುಲದ ದರ್ಪ ತುಳಿದ
ಅರಿಮದಗಜ ಮಲ್ಲ ಬಾ.
ಶ್ವೇತ ದ್ವೀಪ ಶೇಷ ರೂಪಿ
ಸೋದರನೊಡ ನಿಲ್ಲು ಬಾ.
ವಾರುಣಿಯ ನಲ್ಲ ಬಾ.

ವರುಣನೀವ ನೊರೆಯ ಹೂವ
ನಿತ್ಯ ಪೂಜೆ ಕೊಳ್ಳುತ,
ನಂದಗೋಪ ಕಂದ ಸೇವೆ
ಯಿಂದೆ ಹೆರುಷಗೊಳ್ಳುತ,
ಕಾಯುತಿರಲಿ ಕಡಲಿನಂಚ
ಶೃಂಗಾರದ ಹರಿಯ ಮಂಚ
ನಿಲ್ಲು ಬಾ ಹಲಾಯುಧ!"

★

೩

ಕಡಲ ತಡಿಗೆ ಬಲರಾಮನನ್ನು ನಿಲಿಸಿ
ಹೆಜ್ಜೆಗೊಮ್ಮೆ ಹರಿನಾಮರೂಪ ಸ್ಮರಿಸಿ,
ಬಂದ ಕೆಲಸ ಕೈಗೂಡಿತೆಂದು ನಲಿದು
ಸಾಧು ಸಜ್ಜನರ ಪುಣ್ಯಕಾರ್ಯಕೊಲಿದು,
ರೌಪ್ಯಪೀಠ ಪುರದಲ್ಲಿ ನೆಲೆಸಲೆಂದು
ಬಾಲಕೃಷ್ಣ ಭಗವಂತ ಬಂದನೆಂದು
ಆನಂದತೀರ್ಥರಾನಂದ ಬಾಷ್ಪ ಸುರಿಸಿ
ಗೋಪಿಚಂದನದ ಗಡ್ಡೆ ಹೆಗಲಿಗಿರಿಸಿ,
ನಂದಗೋಪ ಹರಿಕಂದ ರೂಪ ನೆನೆದು
ಉಡುಪಿಯತ್ತ ಸಾಗಿದರು ಹಾಡಿ ನಡೆದು.
ಮುಂದ ಮುಂದ ನಡೆದು ಬಂದ
ಉಡುಪಿಯಲಿ ಸವಿಾರಣ
ಹಸಿರು ಚೆಲುವು ತಳೆದು ನಿಂತ
ಮರದ ತಳಿರು ತೋರಣ,
ವಿಪ್ರವೃಂದ ವೇದಘೋಷ
ಗುಡಿಯ ಗಂಟೆ ಮೊಳಗಲು

ಅರಿಯದೊಂದು ಹರುಷ ತುಂಬಿ
   ಊರಿಗೂರೆ ಬೆಳಗಲು,
ತಂದ ಗೋಪಿಚಂದನವನು
   ತಮ್ಮ ಹೆಗಲೊಳಿರಿಸುತ
ನಂದಗೋಪ ಕಂದರೂಪ
   ಹೆಜ್ಜೆಗೊಮ್ಮೆ ಸ್ಮರಿಸುತ,
"ದೇವಕಿ ನಂದನ ನಂದಕುಮಾರ
   ವೃಂದಾವನಾಂಚನ ಗೋಕುಲ ಚಂದ್ರ ।
ಕಂದ ಫಲಾಶನ ಸುಂದರ ರೂಪ
   ನಂದಿತ ಗೋಕುಲ ವಂದಿತ ಪಾದ ।
ಇಂದ್ರ ಸುತಾವಕ ನಂದಕ ಹಸ್ತ
   ಚಂದನ ಚರ್ಚಿತ ಸುಂದರಿ ನಾಥ ।
ಇಂದೀವರೋದರ ದಲ ನಯನ
   ಮಂದರ ಧಾರಿನ್ ಗೋವಿಂದ ವಂದೇ ।
ಚಂದ್ರ ಶತಾನನ ಕುಂದ ಸುಹಾಸ
   ನಂದಿತ ದೈವತಾನಂದ ಸುಪೂರ್ಣ ।
ಮತ್ಸ್ಯಕ ರೂಪ ಲಯೋದ ವಿಹಾರಿನ್
   ವೇದವಿನೇತೃ ಚತುರ್ಮುಖ ವಂದ್ಯ ।
ಕೂರ್ಮ ಸ್ವರೂಪಕ ಮಂದರಧಾರಿನ್
   ಲೋಕವಿಧಾರಕ ದೇವವರೇಣ್ಯ ।
ಸೂಕರ ರೂಪಕ ದಾನವ ಶತ್ರೋ
   ಭೂಮಿವಿದಾರಕ ಯಜ್ಞವರಾಂಗ ।
ದೇವ ನೃಸಿಂಹ ಹಿರಣ್ಯಕ ಶತ್ರೋ
   ಸರ್ವ ಭಯಾಂತಕ ದೈವತ ಬಂಧೋ ।
ವಾಮನ ವಾಮನ ಮಾಣವ ವೇಷ
   ದೈತ್ಯವರಾಂತಕ ಕಾರಣ ರೂಪ ।

ರಾಮ ಭೃಗೂದ್ವಹ ಸೂರ್ಜಿತ ದೀಪ್ತೇ
   ಕ್ಷತ್ರ ಕುಲಾಂತಕ ಶಂಭು ವರೇಣ್ಯ ।
ರಾಘವ ರಾಘವ ರಾಕ್ಷಸ ಶತ್ರೋ
   ಮಾರುತಿ ವಲ್ಲಭ ಜಾನಕಿ ಕಾಂತ ।
ದೇವಕಿ ನಂದನ ಸುಂದರ ರೂಪ
   ರುಕ್ಮಿಣಿ ವಲ್ಲಭ ಪಾಂಡವ ಬಂಧೋ ।
ದೈತ್ಯ ವಿಮೋಹಕ ನಿತ್ಯ ಸುಖಾದೇ
   ದೇವ ಸುಬೋಧಕ ಬುದ್ಧ ಸ್ವರೂಪ ।
ದುಷ್ಟ ಕುಲಾಂತಕ ಕಲ್ಕಿ ಸ್ವರೂಪ
   ಧರ್ಮವಿವರ್ಧನ ಮೂಲಯುಗಾದೇ ।
ನಾರಾಯಣಾಮಲ ಕಾರಣ ಮೂರ್ತೇ
   ಪೂರ್ಣ ಗುಣಾರ್ಣವ ನಿತ್ಯವಿಬೋಧ ।
ಸುಖತೀರ್ಥ ಮುನೀಂದ್ರಕೃತ ಹರಿಗಾಥಾ
   ಪಾಪಹರಾ ಶುಭ ನಿತ್ಯ ಸುಖಾರ್ಥಾ ॥"
ಗೋಪಿಚಂದನದ ಗಡ್ಡೆ ಹೆಗಲಿಗಿರಿಸಿ
   ಆನಂದ ತೀರ್ಥರಾನಂದರೂಪ ಸ್ಮರಿಸಿ,
ಸಾಧು ಸಜ್ಜನರ ಪುಣ್ಯ ಫಲಿಸಿತೆಂದು
   ಬಾಲಕೃಷ್ಣ ಭಗವಂತ ಬಂದನೆಂದು
ಶಿಷ್ಯವೃಂದ ಬರುತಿರಲು ಎದುರುಗೊಂಡು
   ಗೋಪಿಚಂದನದ ಗಡ್ಡೆ ಇಳಿಸಿಕೊಂಡು
ಅನಂತೇಶ್ವರನ ಗಂಟೆ ಮೊಳಗುತಿರಲು
   ಸ್ವರ್ಣಲಾಸ್ಯದಲಿ ಸೂರ್ಯ ಬೆಳಗುತಿರಲು
ವೇದಸೂಕ್ತದುದ್ಘೋಷ ಧಾರೆ ಸುರಿದು
   ಕ್ಷೀರಾಭಿಷೇಕ ವರುಣಾಭಿಷೇಕವೆರೆದು
ಕಡೆದು ಗೋಪಿ ಚಂದನ
   ಪಡೆದರೋ ಯದುನಂದನ.

ನೀಲಮೇಘಶ್ಯಾಮ ಸುಂದರ
ನಂದಗೋಪ ಕುಲಾಬ್ಧಿ ಚಂದಿರ
ಕೃಷ್ಣ ಬಾಲ ಮುಕುಂದನ
ಕಂಡು ದೇವಕಿ ನಂದನ.
ಬಾಲಲೀಲಾ ಲೋಲನಾಗಲು
ರುಕ್ಮಿಣೀ ದೇವಿಯರು ಕೇಳಲು
ಹಗ್ಗ ಕಡಗೋಲುಗಳ ಹಿಡಿದು
ಮಧ್ವಮುನಿಗಳ ಪೂಜೆಗೊಲಿದು
ಬಂದೆ ಪರಮಾನಂದನ.
ವಿಶ್ವ ಕರ್ಮ ವಿನಿರ್ಮಿತ
ರುಕ್ಮಿಣೀಕರ ಪೂಜಿತ
ಕೃಷ್ಣ ಬಾಲ ಮುಕುಂದನ.
ಆನಂದ ತೀರ್ಥಾನಂದನ
ಪಡೆದರೋ ಯದುನಂದನ.
ಆನಂದತೀರ್ಥರಾನಂದ ರೂಪ ಸ್ಮರಿಸಿ
ಹೃದಯ ಕಮಲದಲಿ ಬಿಂಬರೂಪವಿರಿಸಿ
ಸಾಧು ಸಜ್ಜನರ ಪುಣ್ಯ ಫಲಿಸಿತೆಂದು
ಬಾಲಕೃಷ್ಣ ಭಗವಂತ ಬಂದನೆಂದು
ಗುಡಿಯ ಗಂಟೆ ದುಮುದುಮಿಸಿ ಮೊಳಗುತಿರಲು
ಮುತ್ತ್ರ ರತ್ನಗಳ ದೀಪ ಬೆಳಗುತಿರಲು
ವೇದಸೂಕ್ತದುದ್ಘೋಷ ಧಾರೆ ಸುರಿದು
ಕ್ಷೀರಾಭಿಷೇಕ ವರುಣಾಭಿಷೇಕವೆರೆದು
ಹರಿಯನಂತ ಕಲ್ಯಾಣ ರೂಪ ಸ್ಮರಿಸಿ
ಆನಂದತೀರ್ಥರಾನಂದ ಬಾಷ್ಪ ಸುರಿಸಿ
ವಿಷ್ಣುಭಕ್ತಿ ಹಿಡಿದಂಥ ರತ್ನದೀಪ
ದೇವಧ್ಯಾನ ತಲ್ಲೀನ ಮಧ್ವರೂಪ

ಪದ್ಮನಾಭ ಪದಪದ್ಮ ಭಕ್ತಿಗಂಗೆ
ಆನಂದ ತೀರ್ಥರಾನಂದ ತರತರಂಗೆ
ನಂದಗೋಪ ಹರಿಕಂದ ರೂಪ ನೋಡಿ
ಆನಂದ ತೀರ್ಥರಾನಂದದಿಂದ ಹಾಡಿ
"ವಂದಿತಾಶೇಷ ವಂದ್ಯೋರು ವೃಂದಾರಕಂ
ಚಂದನಾ ಚರ್ಚಿತೋದಾರ ಪೀನಾಂಸಕಂ
ಇಂದಿರಾ ಚಂಚಲಾಪಾಂಗ ನೀರಾಜಿತಂ
ಮಂದರೋದ್ಧಾರಿ ವೃತ್ತೋದ್ಭುಜಾ ಭೋಗಿನಮ್ ।
ಪ್ರೀಣಯಾಮೋ ವಾಸುದೇವಂ
ದೇವತಾ ಮಂಡಲ ಖಂಡ ಮಂಡನಂ ।
ಪ್ರೀಣಯಾಮೋ ವಾಸುದೇವಂ"
ಆದಿನಾರಾಯಣ ಅನಂತನು
ಉಡುಪಿಯಲಿ ನೆಲೆನಿಂತನು
ರತ್ನೋಜ್ವಲ ದೀಧಿತಿ ಬೆಳಗಿರಲು
ಮಂಗಲ ಸ್ವರಗಳು ಮೊಳಗಿರಲು
ಪಂಚಾಮೃತದಭಿಷೇಕವ ಮಾಡಿ
ಹರಿಗುಣ ಗಾನದೊಳೋಲಾಡಿ
"ಅಕ್ಷಯಂ ಕರ್ಮ ಯಸ್ಮಿನ್ ಪರೇ ಸ್ವರ್ಪಿತಂ ।
ಪ್ರಕ್ಷಯಂ ಯಾಂತಿ ದುಃಖಾನಿ ಯನ್ನಾಮತಃ ॥
ಅಕ್ಷರೋ ಯೋಽಜರಃ ಸರ್ವದೇವಾಮೃತಃ ।
ಕುಕ್ಷಿಗಂ ಯಸ್ಯ ವಿಶ್ವಂ ಸದಾಜಾದಿಕಂ ॥
ಪ್ರೀಣಯಾಮೋ ವಾಸುದೇವಂ ।
ದೇವತಾ ಮಂಡಲ ಖಂಡ ಮಂಡನಂ ।
ಪ್ರೀಣಯಾಮೋ ವಾಸುದೇವಂ ॥ "
ಮಧ್ವಾಚಾರ್ಯರು ಪೂಜಿಸುತಿರಲು
ಆದಿನಾರಾಯಣ ಅನಂತನು

ಉಡುಪಿಯಲಿ ನೆಲೆ ನಿಂತನು
ರತ್ನೋಜ್ವಲ ದೀಧಿತಿ ಬೆಳಗಿರಲು
ಮಂಗಲ ಸ್ವರಗಳು ಮೊಳಗಿರಲು
ತಿಳಿನೀರಿನೊಳಭಿಷೇಕವ ಮಾಡಿ
ಹರಿಗುಣ ಗಾನದೊಳೋಲಾಡಿ
ಮಧ್ವಾಚಾರ್ಯರು ಪೂಜಿಸುತಿರಲು
ಆದಿನಾರಾಯಣ ಅನಂತನು
ಉಡುಪಿಯಲಿ ನೆಲೆನಿಂತನು
ದಂಡಿಗೆ ಜಾಗಟೆ ಮದ್ದಳೆ ತಾಳ
ಕುಣಿಯಿತು ಭಗವದ್ಭಕ್ತರ ಮೇಳ ॥೩೦
ಸುಂದರ ಬಾಲ ಮುಕುಂದನ ನೋಡಿ
ಹರಿಗುಣ ಗಾನದೊಳೋಲಾಡಿ
"ನಂದವ್ರಜ ಮಧುರೆ ದ್ವಾರಕೆ ಬಿಟ್ಟು ಈ ಸ್ಥಳಕೆ ।
ಬಂದದ್ದೆ ಬಹು ಲಾಭವೋ ॥
ಇಂದಿರಾಪತಿದಯಾಸಿಂಧು ಸುಖ ಪೂರ್ಣ ಗೋ ।
ವಿಂದ ಪಾಲಿಸೊ ಬಿನ್ನಹ ಕೃಷ್ಣ ॥"
ರತ್ನೋಜ್ವಲ ದೀಧಿತಿ ಬೆಳಗಿರಲು
ಮಂಗಲ ಸ್ವರಗಳು ಮೊಳಗಿರಲು
ಕುಣಿಯಿತು ಭಗವದ್ಭಕ್ತರ ಮೇಳ
ಸುಂದರ ಬಾಲ ಮುಕುಂದನ ನೋಡಿ ॥೪೦
ಹರಿಗುಣ ಗಾನದೊಳೋಲಾಡಿ
"ಈ ಮುದ್ದು ಕೃಷ್ಣ ಈ ಕ್ಷಣದ ಸುಖ ಸಾಕು
ಶ್ರೀಮಧ್ವಮುನಿಯ ಮನದೈವವಾದುಡುಪಿಯ ॥
ಕಿರುಗೆಜ್ಜೆ ಕಡೆಯ ಪೆಂಡೆಯ ಕಾಂಚಿ ಕಟಿಸೂತ್ರ
ವರಹಾರ ಪದಕ ಶ್ರೀವತ್ಸ ಕೌಸ್ತುಭ ರತ್ನ
ಗುರುಮುದ್ರೆ ಕಂಕಣಾಂಗದ ಕುಂಡಲ ಪ್ರಭೆಯ

ಶಿರಿನಾವ ಮುಕುಟ ನಾನಾಮಣಿಗಳಿಂದೆಸೆವ ॥
ಈ ಮುದ್ದು ಕೃಷ್ಣ ಈ ಕ್ಷಣದ ಸುಖ ಸಾಕು
ಶ್ರೀಮಧ್ವಮುನಿಯು ಮನದೈವವಾದುಡುವೆಯು ॥"
ಸುಂದರ ಬಾಲ ಮುಕುಂದನ ನೋಡಿ
ಹರಿಗುಣ ಗಾನದೊಳೋಲಾಡಿ
ಕುಣಿಯಿತು ಭಗವದ್ಭಕ್ತರ ಮೇಳ
"ಆನಂದತೀರ್ಥ ಮುನಿಗಳ ಧ್ಯಾನಿಪರಸಂಗ ।
ದಾನಂದದಲಿ ನಿಲ್ಲಿಸೋ ಕೃಷ್ಣಾ ॥
ದೀನಜನ ಮಂದಾರ ನೀನೆಂದು ನಂಬಿದೆನೊ ।
ಸಾನುರಾಗದಲಿ ಕಾಯೊ ಕೃಷ್ಣಾ ॥"
ಹರಿದಾಸರ ಹೃದಯಾರವಿಂದಗಳು
ಭಗವಂತನ ಚರಣಾರವಿಂದಗಳ
ಇರಿಸಿದವು
ಸ್ಮರಿಸಿದವು
ಸುಂದರ ಬಾಲ ಮುಕುಂದನ ನೋಡಿ
ಹರಿಗುಣ ಗಾನದೊಳೋಲಾಡಿ
ಕುಣಿಯಿತು ಭಗವದ್ಭಕ್ತರ ಮೇಳ
"ಹಾಲು ಕಂದನ ಕೈಲಿ ನೀಲದಾ ಕಡಗೋಲು
ನೀಲವರ್ಣದ ಕೃಷ್ಣ ನಲಿದಾಡಿ ಎಂದ ।
ಮೊಸರು ಕಂದನ ಕೈಲಿ ಕುಶಲದಾ ಕಡಗೋಲು
ಕುಸುಮನಾಭನು ಕೃಷ್ಣ ನಲಿದಾಡಿ ಬಂದ ।
ಬೆಣ್ಣೆ ಕಂದನ ಕೈಲಿ ಚಿನ್ನದಾ ಕಡಗೋಲು
ಪನ್ನಂಗ ಶಯನ ಕೃಷ್ಣ ನಲಿದಾಡಿ ಬಂದ ।
ಮುತ್ತು ಕಂದನ ಕೈಲಿ ತುಪ್ಪದಾ ಕಡಗೋಲು
ಭಕ್ತವತ್ಸಲ ಸ್ವಾಮಿ ನಲಿದಾಡಿ ಬಂದ ।"
"ಕಡಗೋಲು ತಾರೆನ್ನ ಚಿನ್ನವೆ । ಮೊಸ

ರೊಡೆದರೆ ಬೆಣ್ಣೆ ಬಾರದು ಮುದ್ದು ರತ್ನವೆ ॥
ಅಣ್ಣನ ಒಡಗೊಂಡು ಬಾರಯ್ಯಾ । ಸವಿ ।
ಬೆಣ್ಣೆಯು ಮುದ್ದೆಯು ಮೆಲುವಿರಂತೆ ॥
ಬಣ್ಣ ಸರವ ನಿನ್ನ ಕೊರಳಿಗೆ ಹಾಕುವೆ ।
ಚಿಣ್ಣರೊಡನೆ ಆಡ ಕಳಹುವೆ ರಂಗ ॥
ಪುಟ್ಟ ಬೊಂಬೆಯು ತಂದು ನಿನ್ನಯು ।
ತೊಟ್ಟಿಲ ಕಾಲಿಗೆ ಕಟ್ಟಿಸುವೆ ॥
ಬಟ್ಟಲು ತುಂಬಿದ ಸಕ್ಕರೆ ನಿನಗೀವೆ ।
ಕಟ್ಟಾಣಿ ಮುತ್ತಿನ ಕಣಿಯೆ ಬಾ ರಾಮು ॥
ಬಡವರ ಭಾಗ್ಯದ ನಿಧಿಯೆ । ಗೋಕುಲದ ಎ
ನ್ನೊಡೆಯ ಮಕ್ಕಳ ಮಾಣಿಕವೆ ।
ಕೊಡು ಮುದ್ದು ಪುರಂದರ ವಿಠಲ ಕೃಷ್ಣಯ್ಯ । ಪೆಂ
ಗಡಲೊಳು ದುಡುಕು ಮಾಡುವರೇನೊ ಕೃಷ್ಣಾ ॥ ”
ರತ್ನೋಜ್ವಲ ದೀಧಿತಿ ಬೆಳಗಿರಲು
ಮಂಗಲ ಸ್ವರಗಳು ಮೊಳಗಿರಲು
ಮಂಗಲದಾರತಿಗಳ ಮಾಡಿ
ಹರಿಗುಣಗಾನದೊಳೋಲಾಡಿ
ಮಧ್ವಾಚಾರ್ಯರು ಪೂಜಿಸುತಿರಲು
ಭಗವನ್ನಾಮಾಮೃತ ನೀಡಿ
“ಆನಂದ ಮುಕುಂದ ಅರವಿಂದ ನಯನ
ಆನಂದ ತೀರ್ಥ ಪರಾನಂದ ವರದ ।
ಸುಂದರಿ ಮಂದಿರ ಗೋವಿಂದ ವಂದೇ
ಆನಂದ ತೀರ್ಥ ಪರಾನಂದ ವರದ ।
ಚಂದ್ರ ಸುರೇಂದ್ರ ಸುವಂದಿತ ವಂದೇ
ಆನಂದ ತೀರ್ಥ ಪರಾನಂದ ವರದ ।
ಚಂದ್ರಕ ಮಂದಿರ ನಂದಕ ವಂದೇ

ಆನಂದ ತೀರ್ಥ ಪರಾನಂದ ವರದ ।
ವೃಂದಾರಕ ವೃಂದ ಸುವಂದಿತ ವಂದೇ ೬೦೦
ಆನಂದ ತೀರ್ಥ ಪರಾನಂದ ವರದ ।
ಮಂದಾರ ಸೂನು ಸುಚರ್ಚಿತ ವಂದೇ
ಆನಂದ ತೀರ್ಥ ಪರಾನಂದ ವರದ ।
ಇಂದಿರಾ ನಂದಕ ಸುಂದರ ವಂದೇ
ಆನಂದ ತೀರ್ಥ ಪರಾನಂದ ವರದ ।
ಮಂದಿರ ಸ್ಯಂದನ ಸ್ಯಂದಕ ವಂದೇ
ಆನಂದ ತೀರ್ಥ ಪರಾನಂದ ವರದ ।
ಆನಂದ ಚಂದ್ರಿಕಾ ಸ್ಯಂದಕ ವಂದೇ
ಆನಂದ ತೀರ್ಥ ಪರಾನಂದ ವರದ ।

॥ श्री कृष्णार्पणमस्तु ॥



ಮಣಿಪಾಲ ಪವರ್ ಪ್ರೆಸ್, ಮಣಿಪಾಲ.